# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017ನೇ ಸಾಲಿನಲ್ಲಿ ಕಾರಾಗೃಹ ಇಲಾಖೆಯ ಅಧಿಕಾರಿ / ನೌಕರರಿಗೆ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 61 ಪಿಆರ್‌ಇ 2011 ದಿನಾಂಕ: 14.8.2013.
2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರಗಳ ಸಂಖ್ಯೆ:ಇಎಸ್‌ಟಿ1/ಸಿಆರ್-69/2017-18, ದಿನಾಂಕ:25.11.2017 ಮತ್ತು 16.12.2017.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಕಾರಾಗೃಹ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡುಲು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ಆದೇಶದಲ್ಲಿ ಇಲಾಖೆಯ ಅಧಿಕಾರಿ / ನೌಕರರ ಅಸಾಧಾರಣ ಸೇವೆ / ರಾಷ್ಟ್ರೀಯ-ರಾಜ್ಯ ಕ್ರೀಡಾ ವಿಶೇಷತೆ ಮತ್ತು ಇತರ ಅಸಾಧಾರಣ ಸೇವೆಗಳನ್ನು ಪರಿಗಣಿಸಿ ಇಲಾಖಾ ಮಟ್ಟದಲ್ಲಿ ಸಭೆ ಜರುಗಿಸಿ ಶಿಫಾರಸ್ಸನ್ನು / ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರಗಳಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು ಒಟ್ಟು 10 ಅಧಿಕಾರಿ / ನೌಕರರ ಪ್ರಸ್ತಾವನೆಗಳನ್ನು ಶಿಫಾರಸ್ಸಿನೊಂದಿಗೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 145 ಪಿಆರ್‌ಇ 2017,**
**ಬೆಂಗಳೂರು, ದಿನಾಂಕ: 22.01.2018.**

2017ನೇ ಸಾಲಿನಲ್ಲಿ ಕಾರಾಗೃಹ ಇಲಾಖೆಯ ಈ ಕೆಳಕಂಡ ನೌಕರರಿಗೆ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡಲು ಅನುಮೋದಿಸಿದೆ:-

1. ಶ್ರೀ ಮಲ್ಲಿಕಾರ್ಜುನ ಎಸ್. ಮಾಳಿ, ಜೈಲರ್, ಜಿಲ್ಲಾ ಕಾರಾಗೃಹ, ದಾವಣಗೆರೆ.
2. ಶ್ರೀ ಟಿ.ಬಿ. ಭಜಂತ್ರಿ, ಜೈಲರ್, ಜಿಲ್ಲಾ ಕಾರಾಗೃಹ, ಹಾವೇರಿ.
3. ಶ್ರೀ ಗೋಪಾಲ ಕೃಷ್ಣ ಕುಲಕರ್ಣಿ, ಜೈಲರ್, ಕೇಂದ್ರ ಕಾರಾಗೃಹ, ಕಲಬುರಗಿ.
4. ಶ್ರೀ ಶಹಾಬುದ್ದೀನ್ ಎಂ.ಕಾಲೇಖಾನ್, ಜೈಲರ್, ಜಿಲ್ಲಾ ಕಾರಾಗೃಹ, ರಾಯಚೂರು.
5. ಶ್ರೀ ಎಂ.ವೆಂಕಟೇಶ್, ಪ್ರಧಾನ ವೀಕ್ಷಕರು, ಜಿಲ್ಲಾ ಕಾರಾಗೃಹ, ಹಾಸನ.
6. ಶ್ರೀ ಪ್ರಾಣೇಶ ಅನಂತರಾವ್ ಕುಲಕರ್ಣಿ, ಪ್ರಧಾನ ವೀಕ್ಷಕರು, ಕೇಂದ್ರ ಕಾರಾಗೃಹ, ಕಲಬುರಗಿ.
7. ಶ್ರೀ ಎಂ.ಎಸ್.ಲೋಕೇಶ್ ನಾಯಕ, ಮುಖ್ಯ ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು.
8. ಶ್ರೀ ಎಸ್.ವೈ.ಕುರಿ, ಮುಖ್ಯ ವೀಕ್ಷಕರು, ಜಿಲ್ಲಾ ಕಾರಾಗೃಹ, ಬಾಗಲಕೋಟೆ.
9. ಶ್ರೀ ಪ್ರಕಾಶ್ ವಿ ಕಾಂಬ್ಳೆ, ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು.
10. ಶ್ರೀ ಟಿ.ವಿ. ಪ್ರಸಾದ್, ವೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು.

....2/-

EST-1

ಮಾನ್ಯ ಮುಖ್ಯಮಂತ್ರಿಯವರ ಪದಕಗಳ ವಿನ್ಯಾಸ ಮತ್ತಿತರೆ ಶಿಷ್ಟಾಚಾರ ಕ್ರಮಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 61 ಪಿಆರ್‌ಇ 2011 ದಿನಾಂಕ: 14.8.2013ರಲ್ಲಿರುವಂತೆ ಪಾಲಿಸತಕ್ಕದ್ದು.

ಕಾರಾಗೃಹ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ ನೀಡಲಾಗುವ ಮಾನ್ಯ ಮುಖ್ಯಮಂತ್ರಿಯವರ ಪದಕಗಳ ವಿತರಣಾ ಪ್ರಕಾರ್ಯವನ್ನು ಪೊಲೀಸ್ ಇಲಾಖೆಯ "ಪದಕ ವಿತರಣಾ ಸಮಾರಂಭ" ದೊಂದಿಗೆ ಆಯೋಜಿಸಲು ಕ್ರಮಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. R. Shobha
(ಎಂ.ಆರ್.ಶೋಭಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

<u>ಗೆ:</u>

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ವಿಕಾಸಸೌಧ, ಬೆಂಗಳೂರು – ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರಿದೆ.

<u>ಇವರಿಗೆ:</u>

1) ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಅವರ ಆಪ್ತ ಕಾರ್ಯದರ್ಶಿಯವರು.
3) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರು.
4) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿ ಶೇಷಾದ್ರಿ ರಸ್ತೆ, ಬೆಂಗಳೂರು.
5) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6) ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ(ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರು ಇವರ ಮುಖಾಂತರ).